# ಧರ್ಮಸ್ಥಳಕ್ಕೆ ಕಪ್ಪು ಚುಕ್ಕೆ: ಶ್ರವಣಬೆಳಗೊಳ ಶ್ರೀ ಖಂಡನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಶ್ರವಣಬೆಳಗೊಳ: ಕರುನಾಡು ಮಾತ್ರವಲ್ಲದೆ ಆಚೆಗೂ ಅಪಾರ ಭಕ್ತ ವೃಂದ ಹೊಂದಿರುವ ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಮೇಲಿನ ಅವಹೇಳನಕಾರಿ ಹೇಳಿಕೆಗಳನ್ನು ಸ್ಥಳೀಯ ದಿಗಂಬರ ಜೈನ ಮಹಾಸಂಸ್ಥಾನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರು ಖಂಡಿಸಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ವೀರೇಂದ್ರ ಹೆಗ್ಗಡೆ ಅವರಿಗೆ ಜೈನಮಠದ ಸಂಪೂರ್ಣ ಬೆಂಬಲ ಘೋಷಿಸಿದ್ದಾರೆ. ಧರ್ಮಸ್ಥಳ ಹೆಸರು ಕೇಳಿದಾಗಲೇ ನಮ್ಮ ಹೃದಯದಲ್ಲಿ ಧರ್ಮದ ಪರಿಮಳ, ದಾನದ ಪಾವಿತ್ರ್ಯ, ಸೇವೆಯ ಮಧುರ ಸ್ಮೃತಿಗಳು ಮೂಡುತ್ತವೆ. ಶತಮಾನಗಳಿಂದ ಎಲ್ಲರಿಗೂ ಮಾರ್ಗ ದರ್ಶಕವಾಗಿ. ನಿಜವಾದ ಮಾನವೀಯತೆಯ ತಾಣವಾಗಿ ಬೆಳಗಿ, ಜಾತಿ-ಧರ್ಮ-ಮತಗಳ ಭೇದ ವಿಲ್ಲದೆ ಚತುರ್ವಿಧ ದಾನ, ಸೇವಾ ಪರಂಪರೆ ನಡೆಸಿಕೊಂಡು ಬಂದಿದೆ. ಎಲ್ಲಾ ವರ್ಗದ ಜನರಿಗೆ ಶ್ರದ್ಧಾ ಕೇಂದ್ರವಾಗಿದೆ. ಧರ್ಮಸ್ಥಳದಿಂದ ನಡೆಯುತ್ತಿರುವ ಮಹಿಳಾ ಸಬಲೀಕರಣ ಮತ್ತು ಧಾರ್ಮಿಕ ಸಹಿಷ್ಣುತೆಯು ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಗುಣಗಾನ ಮಾಡಿದ್ದಾರೆ.

ರಾಜರ್ಷಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರು ತಮ್ಮ ನಿರಂತರ ಪರಿಶ್ರಮ, ನಿಸ್ವಾರ್ಥ ಸೇವಾಭಾವ ಮತ್ತು ಧರ್ಮನಿಷ್ಠೆಯ ಮೂಲಕ ಸಮಾಜದಲ್ಲಿ ಅಳಿಸಲಾಗದ ಗುರುತು ಮೂಡಿಸಿದ್ದಾರೆ. ಇಂತಹ ಪವಿತ್ರ ಕ್ಷೇತ್ರ ಹಾಗೂ ಪವಿತ್ರ ವ್ಯಕ್ತಿತ್ವದ ವಿರುದ್ಧ ತಪ್ಪು ಮತ್ತು ಅವಹೇಳನಕಾರಿ ಹೇಳಿಕೆಗಳು ಪ್ರಸಾರವಾಗುತ್ತಿರುವುದು ಅತ್ಯಂತ ಖೇದಕರ ಮತ್ತು ಧರ್ಮ-ಸಂಸ್ಕೃತಿಗೆ ಅವಮಾನಕಾರಿಯಾಗಿದೆ. ಇಂತಹ ಹೇಳಿಕೆಗಳು ಸಮಾಜದಲ್ಲಿ ಭಿನ್ನಾಭಿಪ್ರಾಯ, ದ್ವೇಷ, ಅಸಮಾಧಾನ ಹುಟ್ಟಿಸುತ್ತವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇದು ಕೇವಲ ಹೆಗ್ಗಡೆಯವರ ಮೇಲೆ ಆಗುತ್ತಿರುವ ಅವಮಾನವಲ್ಲ, ನಮ್ಮ ಸಂಸ್ಕೃತಿ, ನಮ್ಮ ಧರ್ಮ, ನಮ್ಮ ಸೇವಾ ಪರಂಪರೆಯ ಮೇಲಿನ ಅವಮಾನವಾಗಿದೆ ಎಂದು ಎಲ್ಲಾ ಧರ್ಮಾಭಿಮಾನಿಗಳು ಅರಿಯಬೇಕಿದೆ ಎಂದು ಶ್ರೀಗಳು ಎಚ್ಚರಿದ್ದಾರೆ.

ಶ್ರವಣಬೆಳಗೊಳ ಜೈನ ಮಠವು, ಧರ್ಮಸ್ಥಳ ಕ್ಷೇತ್ರದ ವೀರೇಂದ್ರ ಹೆಗ್ಗಡೆ ಅವರ ಮೇಲೆ ಸಂಪೂರ್ಣ ನಂಬಿಕೆ ಹೊಂದಿ ಇಂತಹ ಅನವಶ್ಯಕ, ಅಸತ್ಯ ಹಾಗೂ ಅಸಂಗತ ಆರೋಪಗಳನ್ನು ತೀವ್ರವಾಗಿ ಖಂಡಿಸುತ್ತದೆ ಎಂದು ಸ್ವಾಮೀಜಿ ನುಡಿದಿದ್ದಾರೆ.

ಹಾಗೂ ಧರ್ಮಸ್ಥಳದ ಶ್ರೇಷ್ಠ ಸೇವಾ ಪರಂಪರೆಯನ್ನು ಸಮರ್ಥಿಸುತ್ತದೆ ಮತ್ತು ಶ್ರೀಮಠ ಹಾಗೂ ಶ್ರೀ ಮಠದ ಶಿಷ್ಯವೃಂದದ ಸಂಪೂರ್ಣ ಬೆಂಬಲ ಘೋಷಿಸುತ್ತದೆ.ಸಮಾಜದಲ್ಲಿ ಅಸತ್ಯ ಪ್ರಚಾರ, ತಪ್ಪು ಮಾಹಿತಿ ಹಂಚಿಕೆ ಮತ್ತು ಅವಹೇಳನಕಾರಿ ನಡವಳಿಕೆಗಳನ್ನು ತಡೆಯಲು ಎಲ್ಲಾ ಧರ್ಮಗಳ ಧರ್ಮಗುರುಗಳು, ಧರ್ಮಾಭಿಮಾನಿಗಳು ಧರ್ಮದ ಪರ ಕಂಕಣಬದ್ಧರಾಗಿ ನಿಲ್ಲುವಂತೆ ಅಪೇಕ್ಷಿಸುತ್ತೇವೆ. ನಮ್ಮ ಬೆಂಬಲ, ನಮ್ಮ ಆಶೀರ್ವಾದ ನಮ್ಮ ಪ್ರಾರ್ಥನೆಗಳು ಸದಾ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರೊಂದಿಗೆ ಇರುತ್ತವೆ ಎಂದು ತಿಳಿಸಿದ್ದಾರೆ.

ಸಮಾಜದ ಎಲ್ಲ ವರ್ಗದವರು ಪರಸ್ಪರ ಗೌರವದಿಂದ, ಸತ್ಯಾಸತ್ಯತೆ ಪರಿಶೀಲಿಸಿ, ಸೌಹಾರ್ದತೆ ಉಳಿಸಿಕೊಂಡು ನಡೆದುಕೊಳ್ಳಬೇಕು. ಧರ್ಮಸ್ಥಳ ಕ್ಷೇತ್ರದ ಮೇಲೆ ಹಾಗೂ ಶ್ರೀ ಡಾ. ವೀರೇಂದ್ರ ಹೆಗ್ಗಡೆ ಅವರೊಂದಿಗೆ ನಮ್ಮ ಬೆಂಬಲ ಸದಾಕಾಲ ಅಚಲವಾಗಿರುತ್ತದೆ ಎಂದು ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿದ್ದಾರೆ.

# ನಾಗಮೋಹನ ದಾಸ್ ವರದಿ ಮರು ಪರಿಶೀಲನೆಗೆ ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಪರಿಶಿಷ್ಟ ಜಾತಿ ಒಳಮೀಸಲಾತಿ ವಿಚಾರದಲ್ಲಿ ನಾಗಮೋಹನ ದಾಸ್ ಸರ್ಕಾರಕ್ಕೆ ನೀಡಿರುವ ವರದಿ ಅವೈಜ್ಞಾನಿಕವಾಗಿದೆ. ವರದಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಬಲಗೈ ಸಂಬಂಧಿತ ಜಾತಿಗಳ ಒಕ್ಕೂಟದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ದಲಿತ ಮುಖಂಡ ಹೆಚ್. ಕೆ.ಸಂದೇಶ್ ಮಾತನಾಡಿ, ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ಪರಿಶಿಷ್ಟ ಜಾತಿಯ ಒಳಮೀಸಲಾತಿ ಸಮೀಕ್ಷೆ ವರದಿ ಅವೈಜ್ಞಾನಿಕವಾಗಿದ್ದು, ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ. ನಾಗಮೋಹನ್ ದಾಸ್ ಹೊಲೆಯ ಸಮುದಾಯಕ್ಕೆ ಮರಣ ಶಾಸನ ವರದಿ ನೀಡಿದ್ದಾರೆ. ಈ ವರದಿಯನ್ನು ಜಾರಿ ಮಾಡಿದರೆ ಬಲಗೈ ಸಮುದಾಯದ ಮುಂದಿನ ಪೀಳಿಗೆ ಮೀಸಲಾತಿ ಅವಕಾಶಗಳಿಂದ ವಂಚಿತವಾಗಲಿದೆ. ಹೀಗಾಗಿ ಈ ವರದಿಯನ್ನು ಯಥಾವತ್ತಾಗಿ ಜಾರಿ ಮಾಡದೇ ತಿರಸ್ಕರಿಸಬೇಕು. ಉಪ ಸಮಿತಿ ರಚಿಸಿ ಮರು ಪರಿಶೀಲಿಸಬೇಕೆಂದು ಆಗ್ರಹಿಸಿದರು. ಪರಿಶಿಷ್ಟ ಜಾತಿ ಬಲಗೈ ಸಮುದಾಯ ಕಡಿಮೆ ಇದ್ದು ಎಡಗೈ ಸಮುದಾಯ ಹೆಚ್ಚಿದೆ ಎಂಬುದಾಗಿ ವರದಿ ನೀಡಿದ್ದಾರೆ. ನಾಗಮೋಹನ್ ದಾಸ್ ನೀಡಿರುವ ಒಳ ಮೀಸಲಾತಿ ವರದಿಯು ಅವೈಜ್ಞಾನಿಕವಾಗಿದ್ದು, ಇದನ್ನು ಜಾರಿ ಮಾಡುವ ಮೊದಲು ರಾಜ್ಯ ಸರ್ಕಾರ ಪುನರ್ ಪರಿಶೀಲಿಸಲು ಉಪ ಸಮಿತಿಯನ್ನು ರಚನೆ ಮಾಡಿ ವೈಜ್ಞಾನಿಕವಾಗಿ ದತ್ತಾಂಶವನ್ನು ಸಂಗ್ರಹಿಸಿ ನಂತರ ಒಳ ಮೀಸಲಾತಿ ವರದಿಯನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಬಲಗೈ ಸಮುದಾಯ ಹೊಲಯ ಎಂಬುದಾಗಿ ಜಾತಿ ನೋಂದಾಯಿಸಿದ್ದೇವೆ. ಅಲ್ಲದೇ, ಬಲಗೈ ಸಮುದಾಯದವರು ಹೊಲಯ ಎಂಬುವುದರ ಜತೆಗೆ ಛಲವಾದಿ, ಆದಿಕರ್ನಾಟಕ, ಆದಿದ್ರಾವಿಡ, ಏಕೆ ಎಂಬುದಾಗಿ ಉಪಜಾತಿ ನೋಂದಾಯಿಸಿದ್ದಾರೆ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಸಚಿವ ಸಂಪುಟ ಕರೆದು ನಾಗಮೋಹನ್ ದಾಸ್ ಅವರ ಏಕಸದಸ್ಯ ವಿಚಾರಣಾ ಆಯೋಗವು ಸಲ್ಲಿಸಿರುವ ಸಮೀಕ್ಷೆ ವರದಿ ಪುನರ್ ಪರಿಶೀಲಿಸಿ ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ದಲಿತ ಸಮುದಾಯ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹುಡಾ ಮಾಜಿ ಅಧ್ಯಕ್ಷ ಕೃಷ್ಣಕುಮಾರ್, ದಲಿತ ಮುಖಂಡರಾದ ಕುಮಾರ್ ಗೌರವ್, ವಕೀಲ ರಾಜೇಶ್, ವಿಜಯ್ ಕುಮಾರ್ ಮತ್ತಿತರರು ಇದ್ದರು.

# ಕಾನೂನು ಮೀರಿ ಯುಜಿಡಿ ಕಾಮಗಾರಿ: ಆರೋಪ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಪಟ್ಟಣದಲ್ಲಿ ಖಾಲಿ ನಿವೇಶನವೊಂದಕ್ಕೆ ಯಾವುದೇ ಸಮ್ಮತಿ ಪಡೆಯದೆ ರಸ್ತೆ ಅಗೆದು ಅಕ್ರಮವಾಗಿ ಕುಡಿಯುವ ನೀರು ಮತ್ತು ಯುಜಿಡಿ ಸೌಲಭ್ಯವನ್ನು ಪುರಸಭಾ ಚುನಾಯಿತ ಸದಸ್ಯರೇ ಮಾಡಿಸುತ್ತಿದ್ದಾರೆ ಎಂದು ಪುರಸಭೆ ಕಾಂಗ್ರೆಸ್ ಸದಸ್ಯ ಭೈರಶೆಟ್ಟಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯಾವುದೇ ಖಾಲಿ ನಿವೇಶನಕ್ಕೆ ನಳ ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯ ನೀಡಲು ನಿಯಮ ಇರುವುದಿಲ್ಲ. ಈ ಬಗ್ಗೆ ಖುದ್ದು ಪುರಸಭಾ ಅಧ್ಯಕ್ಷ ಎಚ್.ಕೆ. ಪ್ರಸನ್ನ ಹೇಳಿದರೂ ಅವರ ಪಕ್ಷದ ಜೆಡಿಎಸ್ ಸದಸ್ಯ ಲೇಔಟ್‌ದಾರನ ಪರ ನಿಂತು ಅಕ್ರಮ ಸವಲತ್ತು ನೀಡಲು ಮುಂದಾಗಿರುವುದು ಖಂಡನೀಯ ಎಂದು ದೂರಿದರು.

ದಾಸಗೌಡರ ಬೀದಿ ಅಧ್ಯಕ್ಷ ಎಚ್.ಕೆ. ಪ್ರಸನ್ನ ಚುನಾಯಿತಗೊಂಡ ವಾರ್ಡ್ ಆಗಿರುತ್ತದೆ. ತನ್ನ ವ್ಯಾಪ್ತಿ ಮೀರಿ ನಿಯಮ ಬಾಹೀರಕ್ಕೆ ಒತ್ತು ನೀಡುವುದು ಎಷ್ಟು ಸರಿ. ಪಟ್ಟಣದಲ್ಲಿ ಸಾಕಷ್ಟು ಕಿರು ನೀರು ನೀರು ಸರಬರಾಜು ಘಟಕಗಳು ಕೆಲಸ ಮಾಡುತ್ತಿಲ್ಲ. ತುರ್ತು ಸ್ಥಿತಿಯಲ್ಲಿ ನೀರಿನ ಪೂರೈಕೆಗೆಂದು ಪುರಸಭೆಯಿಂದಲೇ ವಾರ್ಡ್‌ಗಳಲ್ಲಿ ನಿರ್ಮಿಸಿದ್ದ ಕಿರು ನೀರು ಘಟಕಗಳು ನಿರ್ವಹಣೆ ಇಲ್ಲದೆ ಹಾಳಾಗಿವೆ. ಈ ಬಗ್ಗೆ ಪುರಸಭಾ ಮುಖ್ಯಾಧಿಕಾರಿ ಶಿವಶಂಕರ್ ಉಡಾಫೆ ಉತ್ತರ ನೀಡುತ್ತಾರೆ. ಮೇಲಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಬೇಕು ಎಂದಿದ್ದಾರೆ.

ನಾಮನಿರ್ದೇಶಿತ ಸದಸ್ಯ ಉಮೇಶ್ ಲಕ್ಕೇಗೌಡ ಮಾತನಾಡಿ, ಮೊನ್ನೆಯಷ್ಟೆ ಪುರಸಭೆ ಸಮಾನ್ಯ ಸಭೆಯಲ್ಲಿ ಪುರೋಭಿವೃದ್ಧಿ ಕುರಿತು ಪ್ರಶ್ನಿಸಿದ್ದಾಗ ಅಧ್ಯಕ್ಷರ ಬದಲಿಗೆ ಸದಸ್ಯೆ ಸುದಾನಳಿನಿ ನಮ್ಮನ್ನು ಹಿಂಬಾಗಿಲಿನಿಂದ ಬಂದವರು ಎಂದು ಅವಹೇಳನ ಮಾಡಿದರು. ವಿರೋಧಿಸಿದಾಗ ನಮ್ಮ ಮೇಲೆ ಗದರಿ ಹರಿಹಾಯ್ದರು. ರಾಜ್ಯಪಾಲರು ನೇಮಿಸಿರುವ ನಾಮನಿರ್ದೇಶಿತ ಸದಸ್ಯರ ಬಗ್ಗೆ ಈ ರೀತಿ ವರ್ತಿಸಿರುವುದು ಸಂವಿಧಾನಕ್ಕೆ ಗೌರವ ತರುವಂತಿಲ್ಲ. ಈ ಬಗ್ಗೆ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಆರೋಪಿಸಿದರು.

ಪುರಸಭೆ ನಾಮನಿರ್ದೇಶಿತ ಸದಸ್ಯರಾದ ಉದಯಕುಮಾರ್, ಸುನೀತ, ಚಂದ್ರು ಹಾಗೂ ಸೈಯದ್ ಮುಬಾರಕ್ ಇದ್ದರು.

# ಗುಂಡಿಬಿದ್ದ ರಸ್ತೆಯಲ್ಲಿ ಸಂಚಾರ ಸಂಕಷ್ಟ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು: ರಾಷ್ಟ್ರ ಮತ್ತು ರಾಜ್ಯ ಹೆದ್ದಾರಿಗಳಿಗೆ ಸಂಪರ್ಕ ಕಲ್ಪಿಸುವ ತಾಲ್ಲೂಕಿನ ಲಿಂಗಾಪುರ ಗ್ರಾಮ ವ್ಯಾಪ್ತಿಯ ರಸ್ತೆಯಲ್ಲಿ ದೊಡ್ಡ ದೊಡ್ಡ ಗುಂಡಿಗಳು ನಿರ್ಮಾಣಗೊಂಡು ವಾಹನಗಳ ಸಂಚಾರಕ್ಕೆ ತೀವ್ರ ಸಮಸ್ಯೆ ಉಂಟಾಗಿದೆ.

ಬೇಲೂರು ಪಟ್ಟಣದಿಂದ ಅರೇಹಳ್ಳಿ ಮಾರ್ಗವಾಗಿ ಸಕಲೇಶಪುರಕ್ಕೆ ತೆರಳುವ ರಸ್ತೆಯ ಹಲವೆಡೆ ಸಣ್ಣಪುಟ್ಟ ಗುಂಡಿಗಳು ಸಾಮಾನ್ಯವಾಗಿದ್ದರೂ ನೇರವಾದ ರಸ್ತೆಯಲ್ಲಿ ನಿರ್ಮಾಣಗೊಂಡಿರುವ ಗುಂಡಿಗಳಿಂದ ವಾಹನ ಸವಾರರು ಎಚ್ಚರಿಕೆಯಿಂದ ಸಂಚರಿಸುವ ಮೂಲಕ ಅಪಾಯವನ್ನು ತಪ್ಪಿಸುತ್ತಿದ್ದಾರೆ. ಆದರೆ ಲಿಂಗಾಪುರ ಗ್ರಾಮದ ಸಮೀಪದ ಸ್ಮಶಾನದ ಬಳಿ ಇರುವ ತಿರುವಿನಲ್ಲಿ ದೊಡ್ಡ ಗುಂಡಿಗಳಿದ್ದು, ವಾಹನ ಸವಾರರು ಒಂದು ಕ್ಷಣ ಎಚ್ಚರ ತಪ್ಪಿದರೂ ದೊಡ್ಡ ಅಪಘಾತಕ್ಕೆ ಕಾರಣವಾಗಬಹುದೆಂದು ಸ್ಥಳೀಯರು ಆರೋಪಿಸಿದ್ದಾರೆ.

ಸುಸ್ಥಿತಿಯಲ್ಲಿದ್ದ ರಸ್ತೆಯನ್ನು ಕೆಲ ತಿಂಗಳ ಹಿಂದೆ ಜೆಜೆಎಂ ಕಾಮಗಾರಿಯ ಪೈಪ್‌ಲೈನ್ ಅಳವಡಿಸುವ ಸಂಬಂಧ ರಸ್ತೆಯನ್ನು ಅಗೆದು, ಅದನ್ನು ಸರಿಯಾಗಿ ದುರಸ್ತಿ ಮಾಡದ ಕಾರಣ ದುಸ್ಥಿತಿ ನಿರ್ಮಾಣವಾಗಿದೆ. ಇದರಿಂದ ದಿನನಿತ್ಯ ಸಂಚರಿಸುವ ನೂರಾರು ವಾಹನ ಸವಾರರು ಸಂಬಂಧಪಟ್ಟ ಇಲಾಖೆಯ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ರಾಜ್ಯ ಹೆದ್ದಾರಿ-27 ಹಾಗೂ ರಾಷ್ಟ್ರೀಯ ಹೆದ್ದಾರಿ-73 ಮತ್ತು 75ಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ಮಾರ್ಗವಾಗಿರುವುದರಿಂದ ನೂರಾರು ಅಂತರ್ ರಾಜ್ಯ ವಾಹನಗಳು ಈ ರಸ್ತೆ ಬಳಸುತ್ತಿವೆ. ದುಸ್ಥಿತಿಯ ರಸ್ತೆಯಿಂದ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಿರುವುದಲ್ಲದೆ, ಕೆ.ಎಸ್. ಆರ್.ಟಿ.ಸಿ ಬಸ್‌ಗಳಲ್ಲಿ ದಿನನಿತ್ಯ ಸಂಚರಿಸುವ ವಿದ್ಯಾರ್ಥಿಗಳು ಹಾಗು ಸಾರ್ವಜನಿಕರು ಹೈರಾಣಾಗುತ್ತಿದ್ದಾರೆ.

ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತಕ್ಷಣವೇ ಗುಂಡಿ ಬಿದ್ದ ಜಾಗವನ್ನು ದುರಸ್ತಿ ಮಾಡಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಇಲ್ಲದಿದ್ದಲ್ಲಿ ರಸ್ತೆಯಲ್ಲಿ ಹಾನಿಯಾಗಿದೆ ಎಂಬ ಎಚ್ಚರಿಕಾ ಫಲಕಗಳನ್ನು ಅಳವಡಿಸುವ ಮೂಲಕ ವಾಹನ ಸವಾರರಿಗೆ ಮುನ್ನೆಚ್ಚರಿಕೆ ನೀಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# ಕಾಡಾನೆ ದಾಂಧಲೆಗೆ ಕಾಫಿ ಗಿಡಗಳು ನಾಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ತಾಲ್ಲೂಕಿನ ಇಬ್ಬಡಿ ಗ್ರಾಮದಲ್ಲಿ ಕಾಡಾನೆಗಳು ಕಾಫಿ ತೋಟದಲ್ಲಿ ದಾಂಧಲೆ ನಡೆಸಿ, ಕಾಫಿ, ಅಡಿಕೆ ಗಿಡಗಳನ್ನು ನಾಶಪಡಿಸಿವೆ.

ಗ್ರಾಮದ ಧರಣಿ ಅವರಿಗೆ ಸೇರಿದ ಕಾಫಿ ತೋಟಕ್ಕೆ ಎಂಟು ಕಾಡಾನೆಗಳು, ಮರಿಗಳೊಂದಿಗೆ ಸೋಲಾರ್ ಬೇಲಿಯನ್ನು ಮುರಿದು ಒಳನುಗ್ಗಿ ಬೆಳೆಹಾನಿ ಮಾಡಿವೆ. ಈ ದಾಳಿಯಲ್ಲಿ ಸುಮಾರು 300ಕ್ಕೂ ಹೆಚ್ಚು ಕಾಫಿ ಗಿಡಗಳು ಮತ್ತು 100ಕ್ಕೂ ಹೆಚ್ಚು ಆರು ವರ್ಷದ ಅಡಿಕೆ ಗಿಡಗಳು ನಾಶವಾಗಿವೆ. ಅಲ್ಲದೆ, ಸುಮಾರು 300 ಅಡಿ ಉದ್ದದ ಸೋಲಾರ್ ಬೇಲಿಯನ್ನು ಕಿತ್ತೆಸೆದು ಹಾಳು ಮಾಡಿರುವುದಲ್ಲದೆ, ತೋಟದ ಗೇಟ್ ಹಾಗು ಪೈಪ್ ಲೈನ್‌ಗಳನ್ನು ಧ್ವಂಸಗೊಳಿಸಲಾಗಿದೆ. ಸಾಕಷ್ಟು ಕಾಳು ಮೆಣಸಿನ ಬಳ್ಳಿಗಳೂ ನೆಲಕ್ಕುರುಳಿವೆ.

ಸುಮಾರು ಒಂದು ಗಂಟೆಗಳ ಕಾಲ ನಡೆದ ಈ ಕಾಡಾನೆಗಳ ದಾಂಧಲೆಯಿಂದ ಬೆಳೆಗಾರರಿಗೆ ಭಾರೀ ನಷ್ಟ ಉಂಟಾಗಿದೆ. ಕಳೆದ ಒಂದು ವರ್ಷದಿಂದ ಕಾಡಾನೆ ಸಮಸ್ಯೆ ನಿಯಂತ್ರಣದಲ್ಲಿತ್ತು. ಆದರೆ, ಒಂದು ತಿಂಗಳಿಂದ ಮತ್ತೆ ಕಾಡಾನೆಗಳು ಈ ಪ್ರದೇಶದಲ್ಲಿ ಬೀಡುಬಿಟ್ಟು, ಅಪಾರ ಪ್ರಮಾಣದ ಹಾನಿ ಮಾಡುತ್ತಿರುವುದರಿಂದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಹಾಗು ಕಾಫಿ ಮಂಡಳಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಅಣಬೆ ಬೆಳೆಯಲು ಪ್ರಾಯೋಗಿಕ ಮಾರ್ಗದರ್ಶನ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳು ತಾಲ್ಲೂಕಿನ ಹಂಪನಹಳ್ಳಿಯ ರೈತರಿಗೆ ಅಣಬೆ ಬೆಳೆಯ ಕುರಿತು ಪ್ರಾಯೋಗಿಕ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದಲ್ಲಿ ಕೃಷಿ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಗುರುಮೂರ್ತಿ ಮಾತನಾಡಿ, ಅಣಬೆ ಶಿಲೀಂಧ್ರ ವರ್ಗಕ್ಕೆ ಸೇರಿದ ಒಂದು ಆರೋಗ್ಯಕರ ಆಹಾರವಾಗಿದ್ದು, ಹಲವು ವಿಧಗಳಿವೆ. ತಿನ್ನಬಹುದಾದ ಬಟನ್ ಅಣಬೆ, ಸಿಂಪಿ ಅಣಬೆ ಮುಂತಾದವುಗಳ ಜೊತೆಗೆ ವಿಷಪೂರಿತ ಜಾತಿಗಳೂ ಇರುವುದರಿಂದ ಅವನ್ನು ಗುರುತಿಸುವುದು ಮುಖ್ಯವೆಂದು ತಿಳಿಸಿದರು.

ಅಣಬೆ ಬೆಳೆಯುವ ವಿಧಾನವನ್ನು ವಿವರಿಸಿದ ಅವರು, ಭತ್ತದ ಹುಲ್ಲು ಅಣಬೆ ಉತ್ಪಾದನೆಗೆ ಅವಶ್ಯಕ. 5 ಸೆಂ.ಮೀ. ಉದ್ದಕ್ಕೆ ಕತ್ತರಿಸಿದ ಹುಲ್ಲನ್ನು ನೀರಿನಲ್ಲಿ ಕುದಿಸಿ, ನೀರಿನಿಂದ ತೆಗೆದು ಒಣಗಿಸಿದ ಬಳಿಕ 1 ಕೆ.ಜಿ. ಸಾಮರ್ಥ್ಯದ ಪಾಲಿಥೀನ್ ಚೀಲಗಳಲ್ಲಿ ತುಂಬಬೇಕು. ಹಂತ ಹಂತವಾಗಿ 500 ಗ್ರಾಂ ಅಣಬೆ ಬೀಜವನ್ನು ಸಮನಾಗಿ ಸೇರಿಸಬೇಕು. ಅಣಬೆ ಬೀಜವನ್ನು ಬಿಳಿ ಜೋಳ ಬೇಯಿಸಿ, ಅದಕ್ಕೆ ಜಿಪ್ಸಮ್ ಹಾಗು ಸುಣ್ಣದ ಪುಡಿ ಸೇರಿಸಿ ತಯಾರಿಸಲಾಗುತ್ತದೆ. ಚೀಲದ ಬಾಯನ್ನು ಕಟ್ಟಿ ತಂಪಾದ ಸ್ಥಳದಲ್ಲಿ 30 ದಿನಗಳ ಕಾಲ ಇಟ್ಟು, ಬೆಳವಣಿಗೆ ನಡೆಯುವಂತೆ ನೋಡಿಕೊಳ್ಳಬೇಕು. ಈ ಅವಧಿಯಲ್ಲಿ ನೀರನ್ನು ಚಿಮುಕಿಸುವ ಮೂಲಕ ತೇವಾಂಶವನ್ನು ಕಾಪಾಡಬೇಕು ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ತೋಟಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಕಿರಣ್ ಸಾಗರ್ ಅವರು, ಆಲೂಗಡ್ಡೆ ಬೆಳೆಯ ಲಾಭದಾಯಕತೆ ಮತ್ತು ಉತ್ತಮ ಉತ್ಪಾದನೆಗಾಗಿ ಅನುಸರಿಸಬೇಕಾದ ತಂತ್ರಜ್ಞಾನಗಳ ಬಗ್ಗೆ ರೈತರಿಗೆ ಮಾರ್ಗದರ್ಶನ ನೀಡಿದರು.

ಆಲೂಗಡ್ಡೆ ಬೆಳೆಸಲು ಸೂಕ್ತ ಹವಾಮಾನ ಮತ್ತು ಮಣ್ಣಿನ ಆಯ್ಕೆ, ಭೂಮಿ ಸಿದ್ಧತೆ, ಬಿತ್ತನೆ ವಿಧಾನ, ನೀರಾವರಿ ವ್ಯವಸ್ಥೆ, ಕೊಟ್ಟಿಗೆ ಗೊಬ್ಬರದೊಂದಿಗೆ ಟ್ರೈಕೋಡರ್ಮಾ ಮಿಶ್ರಣ ಬಳಕೆ, ರಸಗೊಬ್ಬರದ ಸರಿಯಾದ ಪ್ರಮಾಣ ಹಾಗು ಕುಫ್ರಿ ಹಿಮಾಲಿನಿ, ಕುಫ್ರಿ ಸಿಂಧೂರಿ ತಳಿಗಳ ಗುಣಲಕ್ಷಣಗಳ ಕುರಿತು ಮಾಹಿತಿ ನೀಡಲಾಯಿತು. ಜೊತೆಗೆ ಕಳೆ ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗ ನಿರ್ವಹಣಾ ಕ್ರಮಗಳು, ಕೊಯ್ಲು ಹಾಗು ಸಂಗ್ರಹಣೆ ವಿಧಾನಗಳನ್ನೂ ವಿವರಿಸಲಾಯಿತು.

# ಸಮರ್ಪಕ ವಿದ್ಯುತ್ ಪೂರೈಕೆಗೆ ಕಟ್ಟೆ ಸೋಮನಹಳ್ಳಿ ಗ್ರಾಮಸ್ಥರ ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಳೇಬೀಡು: ಕಟ್ಟೆಸೋಮನಹಳ್ಳಿ ಗ್ರಾಮಕ್ಕೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಇಲ್ಲದೆ ಗ್ರಾಮ ಕತ್ತಲೆಯಲ್ಲಿ ಮುಳುಗುವಂತಾಗಿದೆ. ಗ್ರಾಮಕ್ಕೆ ನಿರ್ದಿಷ್ಟ ಪ್ರಮಾಣದ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಗ್ರಾಮಸ್ಥರು ಹಳೇಬೀಡು ಸೆಸ್ಕ್ ಕಚೇರಿ ಶಾಖಾಧಿಕಾರಿ ಚಂದ್ರು ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮದ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಹಾಗೂ ಗ್ರಾಮದ ಮುಖಂಡರು ಒಟ್ಟಾಗಿ ಆಗಮಿಸಿ ವಿದ್ಯುತ್ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿದರು.

ಕಳೆದ ನಾಲ್ಕು ವರ್ಷದಿಂದ ಗ್ರಾಮದಲ್ಲಿ ವಿದ್ಯುತ್ ಸಮಸ್ಯೆ ಕಾಡುತ್ತಿದೆ. ಗ್ರಾಮಕ್ಕೆ ನಿರಂತರ ಜ್ಯೋತಿ ಯೋಜನೆ ಲೈನ್ ಬಂದಾಗಿನಿಂದಲೂ ವಿದ್ಯುತ್ ಸಮಸ್ಯೆ ಹೆಚ್ಚಾಗಿದೆ. ಆಗಾಗ ಗ್ರಾಮದ ವಿದ್ಯುತ್ ಸಂಪರ್ಕ ಕಡಿತವಾಗುತ್ತಿರುತ್ತದೆ. ಒಂದು ಗಂಟೆಯೂ ಸಮರ್ಪಕ ವಿದ್ಯುತ್ ಇರುವುದಿಲ್ಲ. ಒಮ್ಮೊಮ್ಮೆ ದಿನವಿಡೀ ವಿದ್ಯುತ್ ಪೂರೈಕೆ ಇಲ್ಲದೆ ಪರದಾಡುವಂತಾಗಿದೆ ಎಂದು ಮುಖಂಡ ರಮೇಶ್ ತಿಳಿಸಿದರು.

ಸೂಕ್ತ ರೀತಿಯಲ್ಲಿ ವಿದ್ಯುತ್ ಪೂರೈಕೆ ಇಲ್ಲದೆ ಮಕ್ಕಳ ಶೈಕ್ಷಣಿಕ ಅಧ್ಯಯನಕ್ಕೆ ತೊಂದರೆಯಾಗಿದೆ. ಕುಡಿಯುವ ನೀರು ಪೂರೈಕೆಗೂ ತೊಡಕಾಗುತ್ತಿದೆ. ಆಧುನಿಕತೆ ಪ್ರಭಾವದಿಂದ ಮಿಕ್ಸಿ, ಗ್ರೈಂಡರ್ ಬಳಕೆ ಮಾಡುತ್ತಿರುವುದರಿಂದ ಅಡುಗೆ ಕೆಲಸಕ್ಕೂ ಸಮಸ್ಯೆಯಾಗಿದೆ. ಸಮಸ್ಯೆ ಐದಾರು ವರ್ಷದಿಂದ ಮುಂದುವರೆದಿದೆ. ಹಳೇಬೀಡು ಸೆಸ್ಕ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿದ 4 ಮಂದಿ ಎಂಜಿನಿಯರ್ ಗಳಿಗೆ ಮನವಿ ಮಾಡಿದರೂ ಪ್ರಯೋಜನ ಆಗಿಲ್ಲ. ಅಧಿಕಾರಿಗಳು ಸ್ಪಂದಿಸದಿದ್ದರೆ ಮುಂದಿನ ದಿನದಲ್ಲಿ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಮಹಿಳಾ ಸ್ವಸಹಾಯ ಸಂಘ ಸದಸ್ಯೆ ಶೋಭಾ ಎಚ್ಚರಿಸಿದರು.

ಶಾಖಾಧಿಕಾರಿ ಚಂದ್ರು ಮಾತನಾಡಿ, ಕಟ್ಟೆಸೋಮನಹಳ್ಳಿ ಗ್ರಾಮಕ್ಕೆ ಕೆರೆ ಮಧ್ಯದಲ್ಲಿ ಲೈನ್ ಹಾದು ಹೋಗಿದೆ. ಕೆರೆ ಭರ್ತಿಯಾಗಿರುವುದರಿಂದ ಲೈನ್ ರಿಪೇರಿ ಕಷ್ಟವಾಗುತ್ತಿದೆ. ಹಿಂದೆ ಮೀನುಗಾರರ ತೆಪ್ಪ ಬಳಕೆ ಮಾಡಿಕೊಂಡು ಲೈನ್ ರಿಪೇರಿ ಮಾಡಿಸಿದ್ದೇವು. ಕೆರೆಯಿಂದ ಲೈನ್ ಸ್ಥಳಾಂತರ ಮಾಡಿಸಲು ಅಂದಾಜು ಸಿದ್ದಪಡಿಸಿ ಉನ್ನತ ಅಧಿಕಾರಿಗಳಿಗೆ ಕಳಿಸಿದ್ದೇವೆ. ಮಂಜೂರಾತಿ ದೊರಕಿದ ತಕ್ಷಣ ಕಾಮಗಾರಿ ಕೈಗೊಳ್ಳುತ್ತೇವೆ ಎಂದು ಸೆಸ್ಕ್ ಶಾಖಾಧಿಕಾರಿ ಚಂದ್ರು ತಿಳಿಸಿದರು.

ಮಾಜಿ ಉಪ ಪ್ರಧಾನ್ ಜಯಲಿಂಗಪ್ಪ, ರೈತ ಸಂಘದ ಕೆ.ಪಿ. ಕುಮಾರ್, ಕುಮಾರ್, ಗ್ರಾಮದ ಮುಖಂಡರಾದ ಶಿವಲಿಂಗಪ್ಪ, ಹರೀಶ್, ಕಾವ್ಯ, ಪ್ರಿಯ, ಲಲಿತಮ್ಮ, ಹರೀಶ್, ಸೋಮಶೇಖರ್, ಕಾಂತರಾಜು ಪಾಲ್ಗೊಂಡಿದ್ದರು.

# ಆ. 16ಕ್ಕೆ ಕೃಷ್ಣ ಜಯಂತಿ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆ. 16ರ ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಕೃಷ್ಣ ಜಯಂತಿ ಏರ್ಪಡಿಸಲಾಗಿದೆ.

ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಹಾನಗರ ಪಾಲಿಕೆಯ ಮಹಾಪೌರ ಎಂ. ಚಂದ್ರೇಗೌಡ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಇತರರು ಭಾಗವಹಿಸುವರು. ಹೊಳೆನರಸೀಪುರ ಬಿ.ಆರ್.ಸಿ. ಕೇಂದ್ರದ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಂ.ಜಿ. ಪರಮೇಶ್ ಮಡಬಲು ಉಪನ್ಯಾಸ ನೀಡಲಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-14

**1947:** ಪಾಕಿಸ್ತಾನ ಸ್ವತಂತ್ರ ರಾಷ್ಟ್ರವಾಗಿ ಘೋಷಿಸಲ್ಪಟ್ಟಿತು. ಆ. 15ರಂದು ಭಾರತ ಸ್ವಾತಂತ್ರ್ಯ ಪಡೆದರೂ ಪಾಕಿಸ್ತಾನದ ಸ್ವಾತಂತ್ರ್ಯೋತ್ಸವವನ್ನು ಆಗಸ್ಟ್ 14ರಂದು ಆಚರಿಸಲಾಗುತ್ತದೆ.

**1947:** ಮೊಹಮ್ಮದ್ ಅಲಿ ಜಿನ್ನಾ ಪಾಕಿಸ್ತಾನದ ಮೊದಲ ಗವರ್ನರ್ ಜನರಲ್ ಆಗಿ ಅಧಿಕಾರ ಸ್ವೀಕರಿಸಿದರು.

**1848:** ಅಮೇರಿಕದ ಒರೆಗಾನ್ ಪ್ರಾಂತ್ಯ ಅಧಿಕೃತವಾಗಿ ಸ್ಥಾಪನೆಯಾಯಿತು.

**1880:** ಜರ್ಮನಿಯ ಕೊಲೊನ್ ನಗರದ ಪ್ರಸಿದ್ಧ ಕೊಲೊನ್ ಕತೀಡ್ರಲ್ ನಿರ್ಮಾಣ ಪೂರ್ಣಗೊಂಡಿತು.

**1935** ಅಮೇರಿಕಾದಲ್ಲಿ **Social Security Act** ಜಾರಿಗೊಂಡಿತು.

**1941:** ಅಮೇರಿಕಾ ಮತ್ತು ಬ್ರಿಟನ್ ಅಟ್ಲಾಂಟಿಕ್ ಚಾರ್ಟ ಒಪ್ಪಂದಕ್ಕೆ ಸಹಿ ಹಾಕಿದರು.

### ಜನನ

**1862:** ಪಾಕಿಸ್ತಾನದ ಕವಿ, ತತ್ವಜ್ಞಾನಿ ಅಲ್ಲಾಮಾ ಇಕ್ಬಾಲ್.

**1926:** ರೆನೆ ಗೋಜೆನಿ, ಫ್ರೆಂಚ್ ಖಗೋಳ ವಿಜ್ಞಾನಿ.

**1945:** ಸ್ಟೀವ್ ಮಾರ್ಟಿನ್, ಅಮೇರಿಕಾದ ಹಾಸ್ಯನಟ.

**1950:** ಗ್ಯಾರಿ ಲಾರ್ಸನ್, ಅಮೇರಿಕಾದ ಕಾರ್ಟೂನಿಸ್ಟ್.

### ಮರಣ

**1956:** ಬರ್ಟ್ರಮ್ ಥಾಮಸ್, ಅರೇಬಿಯಾದ ಅಡವಿ ಮರುಭೂಮಿ ದಾಟಿದ ಮೊದಲ ಪಶ್ಚಿಮ ಅನ್ವೇಷಕ.

**1988:** ಎನ್ಜೋ ಫೆರಾರಿ, ಪ್ರಸಿದ್ಧ ಫೆರಾರಿ ಕಾರು ಕಂಪನಿಯ ಸ್ಥಾಪಕ.

# ಆ. 16ರಂದು ನುಲಿಯ ಚಂದಯ್ಯ ಜಯಂತಿ

ಹಾಸನ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆ. 16ರ ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಶ್ರೀ ನುಲಿಯ ಚಂದಯ್ಯ ಜಯಂತಿ ಆಯೋಜಿಸಲಾಗಿದೆ.

ಶಾಸಕ ಹೆಚ್.ಪಿ. ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಪಟೇಲ್, ಮಹಾನಗರ ಪಾಲಿಕೆ ಮೇಯರ್ ಎಂ. ಚಂದ್ರೇಗೌಡ ಭಾಗವಹಿಸಲಿದ್ದಾರೆ.

# ಹಾಸನದಲ್ಲಿ ಕಾನೂನು ವ್ಯವಸ್ಥೆ ನಿಷ್ಕ್ರಿಯ ಬಿಜೆಪಿ ಮಹಿಳಾ ಮೋರ್ಚಾ ಆರೋಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಜಿಲ್ಲೆಯಲ್ಲಿ ಗಾಂಜಾ ಸೇವನೆ, ಲಾಂಗು-ಮಂಜು ಹಿಡಿದು ಪುಂಡ ಪೋಕರಿಗಳು ರಸ್ತೆಯಲ್ಲಿ ಓಡಾಡುತ್ತಿದ್ದರೂ ಪೊಲೀಸ್ ಇಲಾಖೆ ಯಾವುದೇ ಕಠಿಣ ಕ್ರಮ ಕೈಗೊಂಡಿಲ್ಲ ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಮಂಜುಳ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಅಲ್ಪಸಂಖ್ಯಾತ ಬುದ್ಧಿಮಾಂದ್ಯ ಹೆಣ್ಣು ಮಗಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದರೂ ಆಕೆಗೆ ಸಾಂತ್ವಾನ ಹೇಳುವ ಕೆಲಸ ಇದುವರೆಗೂ ಸರ್ಕಾರದಿಂದ ಆಗಿಲ್ಲ. ರಾಜ್ಯ ಮಹಿಳಾ ಆಯೋಗವು ಯಾವುದೇ ಕ್ರಮಕ್ಕೂ ಮುಂದಾಗಿಲ್ಲ. ಜಿಲ್ಲೆಯಲ್ಲಿ ಕಾನೂನು ವ್ಯವಸ್ಥೆ ಕುಸಿತ ಕಂಡಿದೆ ಎಂದು ದೂರಿದರು.

ಬಿಜೆಪಿ ಮಹಿಳಾ ಮೋರ್ಚಾ ಅತ್ಯಾಚಾರಕ್ಕೊಳಗಾದ ಸಂತ್ರಸ್ತೆ ಮತ್ತು ಆಕೆಯ ಕುಟುಂಬಕ್ಕೆ ಧೈರ್ಯ ತುಂಬಿ ಅವರ ಜೊತೆ ನಾವಿದ್ದೇವೆ ಎಂಬ ಭರವಸೆ ನೀಡಿದ್ದೇವೆ. ನಗರ ಪ್ರದೇಶದಲ್ಲಿ ಗಾಂಜಾ ಸೇವನೆ ಮಾಡುವವರ ಸಂಖ್ಯೆ ಹೆಚ್ಚಾಗಿದೆ ಎಂಬ ಆರೋಪ ಕೇಳಿಬಂದಿದೆ. ಪುಂಡರು ಲಾಂಗು-ಮಚ್ಚು ಹಿಡಿದು ಸಾರ್ವಜನಿಕರಿಗೆ ಭಯಹುಟ್ಟಿಸುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರೂ ಪೊಲೀಸರಿಂದ ಕಠಿಣ ಕ್ರಮ ತೆಗೆದುಕೊಳ್ಳುವ ಕೆಲಸವಾಗಿಲ್ಲ ಎಂದರು. ಧರ್ಮಸ್ಥಳ ವಿಚಾರಕ್ಕೆ ಸಂಬಂಧ ರಾಜ್ಯ ಮಹಿಳಾ ಆಯೋಗ ದೂರು ನೀಡಿತು ಎಂಬ ಕಾರಣಕ್ಕೆ ಎಸ್ಐಟಿ ರಚಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಅದೇ ರೀತಿ ಹಾಸನದಲ್ಲಿ ನಡೆದಿರುವ ಕೃತ್ಯ ಮಹಿಳಾ ಆಯೋಗದ ಗಮನಕ್ಕೆ ಬಂದಿಲ್ಲವೇ ಎಂದು ಪ್ರಶ್ನಿದ ಅವರು, ಲವ್‌ಜಿಹಾದ್ ಹೆಸರಿನಲ್ಲಿ ಹಿಂದೂ ಹೆಣ್ಣು ಮಕ್ಕಳ ಕೊಲೆಗಳಾಗುತ್ತಿದ್ದರೂ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಆದರೆ, ಧರ್ಮಸ್ಥಳ ವಿಚಾರದಲ್ಲಿ ಷಡ್ಯಂತ್ರ ನಡೆಸಲಾಗುತ್ತಿದೆ. ಅನಾಮಿಕ ವ್ಯಕ್ತಿ ಹೇಳಿದ ಎಂಬ ಕಾರಣಕ್ಕೆ ಸಿಕ್ಕ ಸಿಕ್ಕ ಕಡೆಗಳಲ್ಲೆಲ್ಲ ಭೂಮಿ ಅಗೆಯಲಾಗುತ್ತಿದೆ. ಹಿಂದೂಗಳ ಧಾರ್ಮಿಕ ಭಾವನೆ ಧಕ್ಕೆಯುಂಟು ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ. ಆನಾಮಿಕ ವ್ಯಕ್ತಿಯನ್ನು ಬಂಧನಕ್ಕೆ ಒಳಪಡಿಸಿ, ಅಪಪ್ರಚಾರ ಮಾಡುತ್ತಿರುವ ಆತನ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಆಪರೇಷನ್ ಸಿಂಧೂರ, ಆಪರೇಷನ್ ಮಹದೇವ್ ಯಶಸ್ಸಿಗೆ ಕಾರಣವಾದ ಭಾರತೀಯ ಸೇನೆಯ ಯೋಧರ ಸೌರ್ಯ, ಸಾಹಸಕ್ಕೆ ಈ ಬಾರಿಯ ಹರ್ ಘರ್ ತಿರಂಗ ಯಾತ್ರೆಯನ್ನು ಸಮರ್ಪಿಸಲಾಗುತ್ತಿದೆ. ಆ.13, 14 ಮತ್ತು 15 ರಂದು ಪ್ರತಿ ಮನೆಗಳ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸಲಾಗುವುದು ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಕಾರ್ಯದರ್ಶಿ ಅಮಿತ್ ಶೆಟ್ಟಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ, ಮುಖಂಡರಾದ ಆಡುವಳ್ಳಿ ಪ್ರಕಾಶ್, ಸಚಿನ್, ಅರ್ಷಿತ್, ರಾಜಕುಮಾರ್, ನೇತ್ರಾವತಿ ಮತ್ತಿತರರು ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248